**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.72/2020**

**(ಚಾ.ಸಾ.9/ಪ್ರಾ.ಸಾ.7)**

ತಾಃ 10.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಲಿಂಗರಾಜು |
| ತಂದೆಯ ಹೆಸರು | ನಾಗಪ್ಪ |
| ವಯಸ್ಸು | 49 ವರ್ಷ |
| ಉದ್ಯೋಗ | ಛಾಯಾಗ್ರಾಹಕರು |
| ವಾಸ ಸ್ಥಳ | ಮಾಚೋಹಳ್ಳಿ |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ಸುಮಾರು 4 ವರ್ಷದ ಹಿಂದೆ ಪೊಲೀಸರು ನನ್ನ ಸ್ಟುಡಿಯೋಗೆ ಬಂದು ಫೋಟೋ ತೆಗೆಸಲು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಅದರಂತೆ ನನ್ನನ್ನು ಮಾಚೋಹಳ್ಳಿ ಫಾರೆಸ್ಟ್ ಗೇಟ್ ಬಳಿ ಕರೆದುಕೊಂಡು ಹೋದರು. ಸದರಿ ಸ್ಥಳದಲ್ಲಿ ನಾನು ಪೋಟೋಗಳನ್ನು ತೆಗೆದಿದ್ದು ಸಾಕ್ಷಿದಾರರು ನಿ.ಪಿ.3 (16 ಪೋಟೊಗಳು) ನೋಡಿ ಗುರುತಿಸಿರುತ್ತಾರೆ. ಸ್ಥಳದಲ್ಲಿ ಒಂದು ಇನೋವಾ ಕಾರ್ ಸಹ ಇದ್ದು ನಿ.ಪಿ.3 ರಲ್ಲಿ ಕಂಡು ಬರುವ ಎಲ್ಲಾ ವಸ್ತುಗಳ ಬಗ್ಗೆ ನಾನೇ ಪೋಟೋ ತೆಗೆದಿರುತ್ತೇನೆ.

2. ನಾವು ಸ್ಥಳದಲ್ಲಿ ಪೋಟೋ ತೆಗೆದಾಗ 12.00 ಗಂಟೆಗೂ ಮೇಲ್ಪಟ್ಟು ಸಮಯ ಆಗಿತ್ತು. ಇದಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ**

3. ಆರೋಪಿ ಪರ ವಕೀಲರನ್ನು ಕೂಗಿಸಿದ್ದು ಗೈರು ಹಾಜರಿದ್ದು ಆರೋಪಿ ತನ್ನ ಪರ ವಕೀಲರು ಮುಂದಿನ ತಾರೀಖಿನಂದು ಬರುವುದಾಗಿ ತಿಳಿಸಿದ್ದು ಯಾವುದೇ ಸಕಾರಣಗಳು ಇಲ್ಲವಾಗಿ ಆರೋಪಿಯ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.